


ಡಾ.ವಿನೋದ ಛೆಬ್ಬಿ

**ಸಂಬಂಧ ಕಟ್ಟಿಕೊಳ್ಳುವಾಗ ಆಗುವ ಆಘಾತವು ಸಂಬಂಧ ಸರಿಯಾದ ಮೇಲೂ ಒಳಗೇ ಕುದಿಯುತ್ತ ಇರುತ್ತದೆ.**

# 89: ಸರಿಬರದ ದೇಹಭಾಷೆ

ಲೂಸಿ ಲೋಚನ್ ಅವರ ದಾಂಪತ್ಯ ಚಿಕಿತ್ಸೆ ನಡೆಯುತ್ತಿದೆ. ಅವರು ತಮ್ಮ ಒಂಟಿತನವನ್ನು ನಿವಾರಿಸಿಕೊಳ್ಳಲು ಸಂಗಾತಿಯನ್ನು ಆರಿಸಿಕೊಂಡಿದ್ದಾರೆಂದು ಅರ್ಥಮಾಡಿಸಿಕೊಟ್ಟೆ.

ಲೂಸಿ ಕೇಳಿದಳು: 'ಲೋಚನ್ ನನಗೆ ಬೇಕು ಎಂದಿದ್ದರೂ ಬೇಡ ಎಂದು ತೋರಿಸುತ್ತಿದ್ದೇನೆ ಅಂತ ನೀವು ಹೇಳಿದಿರಿ. ಇದು ನನಗೆ ಅಷ್ಟಾಗಿ ಸರಿಕಾಣುತ್ತಿಲ್ಲ. ಲೋಚನ್ ನನ್ನ ಮನಸ್ಸಿಗೆ ಹತ್ತಿರವಾಗಲಿ, ನನ್ನನ್ನು ಅರ್ಥಮಾಡಿಕೊಳ್ಳಲಿ ಅಂತ ಮೊದಲಿನಿಂದಲೂ ಆಸೆಯಿದೆ. ಇದನ್ನು ಪ್ರಕಟವಾಗಿ ತೋರಿಸಿಕೊಟ್ಟರೂ ಅವನು ಹತ್ತಿರವಾಗಲು ಹಿಂದೆಮುಂದೆ ನೋಡುತ್ತಾನೆ. ಆಗ ಅವನ ಮೇಲಿರುವ ನಂಬಿಕೆಯೇ ಕಳೆದುಹೋಗುತ್ತದೆ. ಸಿಕ್ಕಾಪಟ್ಟೆ ರೇಗಿಬಿಡುತ್ತೇನೆ'.

ಲೂಸಿಯ ಈ ಸಮರ್ಥನೆಯ ಹಿಂದೆ ಏನಿರಬಹುದೆಂದು ನನಗೆ ಕುತೂಹಲ ಆಯಿತು. ನಾನೆಂದೆ: 'ಲೋಚನ್ ನಿಮ್ಮ ಪ್ರೀತಿಯ ಕರೆಗೆ ಓಗೊಡದಿದ್ದರೆ ರೇಗುವುದು ನನಗೆ ಅರ್ಥವಾಯಿತು. ಆದರೆ ನಂಬಿಕೆ ಕಳೆದುಹೋಗುವುದು ಎಂದರೆ...? ಅರ್ಥವಾಗಲಿಲ್ಲ. ವಿವರಿಸುತ್ತೀರಾ?'

ಲೂಸಿ ನೆನಪು ಮಾಡಿಕೊಳ್ಳುತ್ತಲೇ ಒಮ್ಮಿಂದೊಮ್ಮೆಲೇ ಮೌನ ಧರಿಸಿ ಗಂಭೀರವಾದಳು. ಕಣ್ಣುಗಳು ಕೊಳಗಳಾದವು. ನಾನು ಆಕೆಯತ್ತ ತಳ್ಳಿದ ಟಿಶ್ಯೂ ಪೇಪರ್ ಡಬ್ಬದಿಂದ ಪೇಪರ್ ಎಳೆದುಕೊಂಡು ಮುಖ ಮುಚ್ಚಿಕೊಂಡಳು. ಕಣ್ಣೀರು ಒರೆಸಿಕೊಳ್ಳುತ್ತ ಕೆಲವು ಕ್ಷಣ ಕಳೆದಳು. ನಂತರ ಸಾವರಿಸಿಕೊಳ್ಳುತ್ತ 'ಸ್ಸಾರಿ...' ಎನ್ನುತ್ತ ನನ್ನ ಕಡೆಗೆ ನೋಡಿದಳು. ದುಃಖ ವ್ಯಕ್ತಪಡಿಸುವುದೂ ಇಲ್ಲಿ ಸಹಜವೆಂದು ಭರವಸೆ ಕೊಟ್ಟು ಕಾಯ್ದೆ. ಆಕೆ ಒಂದು ಘಟನೆ ವಿವರಿಸಿದಳು.

ಅವರಿಬ್ಬರೂ ತೀವ್ರ ಆಕರ್ಷಣೆಗೆ ಒಳಗಾದ ಕಾಲ. ಲೂಸಿಗೆ ಲೋಚನ್ ಎಂದರೆ ಮೈಯೆಲ್ಲ ಪುಳಕ ಬರುತ್ತಿತ್ತು. ಅವನ ಭೇಟಿಗೆ ತುದಿಗಾಲಲ್ಲಿ ಕಾಯುತ್ತಿದ್ದಳು. ಅವನೊಡನೆ ಮಾತಾಡುವ ಬಯಕೆ ಪುಟಿದೇಳುತ್ತಿತ್ತು. ಲೋಚನ್ ಫೋನ್ ಎತ್ತಿಕೊಳ್ಳುತ್ತಿರಲಿಲ್ಲ. ಅತೀವ ಸಂಕಟದಿಂದ ಒದ್ದಾಡುತ್ತಿದ್ದಳು. ಅವನು ಸಿಗುವ ತನಕವೂ ಬಿಗಿಯಾಗಿ ಇರುತ್ತಿದ್ದಳು. ಆ ಕ್ಷಣಗಳು ಆಕೆಗೆ ಭಯಂಕರವಾಗಿದ್ದುವು. ಲೋಚನ ಸಿಕ್ಕ ತಕ್ಷಣ ಬಿಗಿಯಾಗಿ ತಬ್ಬಿಕೊಳ್ಳುತ್ತಿದ್ದಳು. ಆಗ ಲೋಚನ ಆಕೆಯ ಮೈಮೇಲೆ, ಉಡುಪಿನೊಳಗೆ ಕೈಯಾಡಿಸಲು ಶುರುಮಾಡುತ್ತಿದ್ದ. ಅವನ ಸ್ಪರ್ಶದಲ್ಲಿ ಕಾಮಾವೇಶ ಭೋರ್ಗರೆಯುವುದು ಅವಳ ಅರಿವಿಗೆ ಬರುತ್ತಿತ್ತು. ಆದರೆ ಅದಕ್ಕೆ ಆಕೆ ಇನ್ನೂ ತಯಾರಾಗಿರಲಿಲ್ಲ. ಕಾಮಕೂಟಕ್ಕಿಂತ ತಬ್ಬುಗೆಯಲ್ಲಿ ಕಾಲ ಕಳೆಯುವುದೇ ಆಕೆಗೆ ಅಪ್ಯಾಯಮಾನವಾಗಿತ್ತು. ಹಾಗೆಂದು ವ್ಯಕ್ತಪಡಿಸಿದಾಗ ಲೋಚನನ ಅಪ್ಪುಗೆಯ ಬಿಗಿ ಕಡಿಮೆಯಾಗಿ ತಣ್ಣಗಾಗುವುದನ್ನು ಗಮನಿಸಿದ್ದಳು. ಅಪ್ಪುಗೆಯಲ್ಲಿ ಆವೇಗ ಉಳಿಯಬೇಕಾದರೆ ಆಕೆ ಅವನ ಕಾಮದ ಕರೆಗೆ ಸ್ಪಂದಿಸಲೇಬೇಕಾಗಿತ್ತು. ಹೀಗೆ ಪ್ರೀತಿಯ ಹೆಸರಲ್ಲಿ ತನ್ನ ಇಷ್ಟದ ವಿರುದ್ಧ ಕಾಮಕೂಟದಲ್ಲಿ ಪಾಲುಗೊಂಡದ್ದು ಹಲವಾರು ಸಲ. ಅವಳಿಗೇ ಇಷ್ಟವಾದದ್ದು ವಿರಳ. ಇದು ಅವರಿಬ್ಬರ ಮಿಲನದ ಕ್ರಮಕ್ಕೆ ಒಂದು ರಿವಾಜು ಹಾಕಿತು: ಬಿಗಿಯಾಗಿ ತಬ್ಬಿಕೊಳ್ಳುವುದು ಅವನಿಗೆ ಕಾಮಕೂಟಕ್ಕೆ ಆಹ್ವಾನ ಕೊಟ್ಟಂತೆ, ಹಾಗೂ ಕಾಮಕೂಟದ ನಂತರವೇ ಅವರ ಹಾರ್ದಿಕ ಮಾತುಕತೆ.

ಒಂದು ಸಲ ಏನಾಯಿತೆಂದರೆ, ಅಶೋಕ ಹಾಗೂ ಕಿಶೋರಿ — ಇವರು ಲೂಸಿಯ ಸಹಪಾಠಿಗಳಾಗಿದ್ದು, ಪ್ರೇಮಿಸಿ ಮದುವೆಯಾಗಿ ದಿಲ್ಲಿಯಲ್ಲಿ ನೆಲೆಸಿದ್ದರು— ಆಕೆಯನ್ನು ಭೇಟಿಯಾಗಲು ಮರುದಿನ ಬರುವವರಿದ್ದರು. ಲೂಸಿ ಕಿಶೋರಿಗೆ ತನ್ನ ಹಾಗೂ ಲೋಚನನ ಸಂಬಂಧದ ಬಗೆಗೆ ಹೇಳಿಕೊಂಡಿದ್ದಳು. ಲೋಚನನನ್ನು ತನ್ನ ಭಾವೀ ಪತಿಯೆಂದು ಅವರಿಗೆ ಪರಿಚಯಿಸಬೇಕೆಂದ್ದು ತವಕಿಸುತ್ತಿದ್ದಳು. ಆದರೆ ಆಗ ಇಬ್ಬರ ನಡುವೆ ಪ್ರೇಮಕಾಮದ ಸಂಭ್ರಮವಿತ್ತೇ ವಿನಾ ಮದುವೆಯ ಬಗೆಗೆ ಖಚಿತ ಮಾತು ನಡೆದಿರಲಿಲ್ಲ. ಹಾಗಾಗಿ ಆ ಸಾಯಂಕಾಲ ಲೋಚನನ ಜೊತೆಗೆ ಇದರ ಬಗೆಗೆ ಮಾತಾಡಬೇಕೆಂದು ನಿರ್ಧರಿಸಿದ್ದಳು. ಆದಿನ ಕೂಡ ಲೋಚನ್ ತಡವಾಗಿ ಬಂದ. ಸಮಯ ಕಡಿಮೆ ಆದುದರಿಂದ ಅಸಮಾಧಾನದಿಂದಲೇ ಭೇಟಿ ಶುರುವಾಯಿತು. ಅವನನ್ನು ಬಿಗಿಯಾಗಿ ತಬ್ಬಿಕೊಳ್ಳಲು ಮನಸ್ಸು ಬರಲಿಲ್ಲ. ಮಾತು ಹೇಗೆ ಶುರುಮಾಡುವುದು ಎಂದು ಯೋಚಿಸುತ್ತಿರುವಾಗ ಲೋಚನ ಕಾಮಸುಖಕ್ಕೆ ಅವಸರಿಸಿದ. ಇವೊತ್ತು ಅದು ಬೇಡ, ಕೂತು ಮಾತಾಡೋಣ ಎಂದಾಗ ಲೋಚನ ನಿರಾಸೆ ತೋರಿಸಿದ. ಇಬ್ಬರೂ ಸ್ವಲ್ಪ ಹೊತ್ತು ನೆಲದಮೇಲೆ ಕುಳಿತರು. ಅದೂ ಇದೂ ಮಾತಾಡಿದ ನಂತರ ಲೋಚನ ಥಟ್ಟನೆ ಹೊರಡಲು ಎದ್ದುನಿಂತ. ಆಗ ಲೂಸಿ ಲೋಚನನ ಮೊಳಕಾಲುಗಳನ್ನು ತಬ್ಬಿಕೊಂಡು, 'ನನ್ನನ್ನು ಯಾವಾಗ ಮದುವೆಯಾಗುತ್ತೀಯಾ?' ಎಂದು ಆರ್ತ ಸ್ವರದಿಂದ ಕೇಳಿದಳು. ಅದಕ್ಕೆ ಅವನ ಪ್ರತಿಕ್ರಿಯೆ? 'ನೋಡೋಣ.' ಆಕೆ ತಲೆಯೆತ್ತಿ ಸ್ಪಷ್ಟೀಕರಣ ಕೇಳಿದಾಗ, 'ನಿನ್ನ ವರ್ತನೆಯಲ್ಲಿ ಸುಧಾರಣೆ ತಂದುಕೋ, ಆಮೇಲೆ ನೋಡೋಣ' ಎಂದು ಹೇಳಿದ. ಇವಳಿಗೆ ಆಘಾತವಾಗಿ ದೂರ ಸಿಡಿದೆದ್ದು ನಿಂತಳು. ಕಣ್ಣೀರಿನ ಕೆಂಗಣ್ಣುಗಳಿಂದ ನೋಡುತ್ತ ಹೊರಟೇಬಿಟ್ಟಳು. ಅವನು ಇವಳನ್ನು ತಡೆದ. ಅವನ ಹಿಡಿತದಿಂದ ಕೊಸರಿಕೊಂಡು ಬಾಯಿಗೆ ಬಂದಂತೆ ಬಯ್ಯುತ್ತ ದೂರವಾದಳು. ಅವನ ಬಗೆಗೆ ಅಪನಂಬಿಕೆ ಹುಟ್ಟಿದ್ದು ಆಗಲೇ. ಮುಖಮೂತಿ ನೋಡದೆ ಇವನನ್ನು ಬೈಯಲು ಶುರುಮಾಡಿದ್ದೂ ಆಗಲೇ.

'ಆವೊತ್ತಿನಿಂದ ಬಯ್ಯಲು ಶುರುಮಾಡಿದ್ದೇನೆ. ನನ್ನ ಭಾವನೆಗಳನ್ನು ಅರ್ಥಮಾಡಿಸಬೇಕಾದರೆ ಅವನನ್ನು ಬೈಯಲೇಬೇಕಾಗುತ್ತದೆ.' ಎಂದು ಹೇಳಿ ಮೌನವಾಗಿ ಶೂನ್ಯ ದೃಷ್ಟಿಯಿಂದ ಉಗುರುಗಳನ್ನು ನೋಡತೊಡಗಿದಳು.

ನಂತರ ಲೋಚನ್ ಮಾತಾಡಿದ. 'ಅದಾದ ನಂತರ ಅವಳನ್ನು ಮನವೊಲಿಸಲು ಎಷ್ಟೋ ಪ್ರಯತ್ನಪಟ್ಟೆ. ಅವಳು ಫೋನ್ ಎತ್ತಿಕೊಳ್ಳುತ್ತಿರಲಿಲ್ಲ. ಆಫೀಸಿಗೆ ಹೋದರೆ ಬಿಡುವಿಲ್ಲ ಎಂದು ಒಳಗಿನಿಂದಲೇ ಹೇಳಿಕಳಿಸುತ್ತಿದ್ದಳು. ಕಾದು ಕಾದೂ ಕಡೆಗೆ ಅವಳನ್ನು ಭೇಟಿಯಾಗಿ ಕ್ಷಮೆ ಕೇಳಿದೆ. ಬೀದಿಯಲ್ಲಿ ಆಕೆಯ ಕಾಲು ಹಿಡಿಯುವುದೊಂದೇ ಬಾಕಿ. ಆಮೇಲೆ ಸರಿಹೋದಳು.' ಎಂದು ನಿಟ್ಟುಸಿರುಬಿಟ್ಟ. ಅದಕ್ಕೆ ಲೂಸಿ ಅವನನ್ನು ತಿರಸ್ಕಾರದಿಂದ ನೋಡಿ ಮುಖ ತಿರುವಿದಳು— ಅದನ್ನು ಲೋಚನ್ ಗಮನಿಸಲಿಲ್ಲ ಎನ್ನುವುದನ್ನು ಗಮನಿಸಿದೆ.

ನನಗೇನೋ ಥಟ್ಟನೆ ಹೊಳೆಯಿತು. 'ನೀವಿಬ್ಬರೂ ಪರಸ್ಪರ ಮುಖಮಾಡಿ ಕುಳಿತುಕೊಳ್ಳಿ' ಎಂದು ಅವಸರಿಸಿದೆ. 'ಈಗ ಎರಡು ನಿಮಿಷಗಳ ಕಾಲ ಒಬ್ಬರನ್ನೊಬ್ಬರು ಕಣ್ಣಲ್ಲಿ ಕಣ್ಣಿಟ್ಟು ನೋಡಿ. ಮಾತಾಡಬೇಡಿ. ಹಾಗೆ ನೋಡುವಾಗ ನಿಮ್ಮ ಸಂಗಾತಿ ಏನೆಂದುಕೊಳ್ಳುತ್ತಿದ್ದಾರೆ, ಹಾಗೂ ಅದಕ್ಕೆ ನೀವೇನು ಅಂದುಕೊಳ್ಳುತ್ತಿದ್ದೀರಿ ಎಂಬುದನ್ನು ಅರ್ಥಮಾಡಿಕೊಳ್ಳಿ.' ಎಂದೆ. ಎರಡು ನಿಮಿಷಗಳ ನಂತರ ಕಾಗದದ ತುಂಡು ಕೊಡುತ್ತ ಹೇಳಿದೆ: 'ನಿಮ್ಮ ಅನುಭವವನ್ನು ಇದರಲ್ಲಿ ಬರೆಯಿರಿ. ಒಬ್ಬರು ಬರೆದದ್ದನ್ನು ಇನ್ನೊಬ್ಬರು ನೋಡುವಂತಿಲ್ಲ. ಬರೆದಾದ ನಂತರ ನನಗೆ ಕೊಡಿ.' ಎಂದು ಕಾಯ್ದೆ.

ಎರಡೂ ಕಾಗದಗಳು ನನ್ನ ಕೈಸೇರಿದುವು. ಅದರಲ್ಲಿ ಏನು ಬರೆದಿತ್ತು? ಅದನ್ನು ಮುಂದಿನ ಸಲ ನೋಡೋಣ.

**ಸೂಚನೆ: ಓದುಗರು ತಮ್ಮ ಸಮಸ್ಯೆಗಳಿಗೆ ಸಲಹೆ ಬಯಸಿದಲ್ಲಿ ಪತ್ರವನ್ನು ಬರೆಯಬಹುದು. ವಿಳಾಸ: ಸುಖೀ ದಾಂಪತ್ಯ ವಿಭಾಗ, ಸುಧಾ ವಾರಪತ್ರಿಕೆ, 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು 01 ಉಚಿತ ಸಹಾಯವಾಣಿಗೆ ಪ್ರತಿ ಮಂಗಳವಾರ ಹಾಗೂ ಶುಕ್ರವಾರ ಕರೆಮಾಡಿ. ಲೈಂಗಿಕ ಸಮಸ್ಯೆಗಳಿಗೆ: 8050255229 (3ರಿಂದ 5ರ ತನಕ); ದಾಂಪತ್ಯ ಸಮಸ್ಯೆಗಳಿಗೆ: 8494944888 (ಬೆಳಿಗ್ಗೆ 11ರಿಂದ ಸಂಜೆ 5ರ ತನಕ) ಲೇಖಕರ ವಿಳಾಸ: www.medisex.org**